# ಪುಟಾಣಿಗಳಿಗೆ ಪ್ರವಾಸದ ಕೈಪಿಡಿ



ಪ್ರವಾಸದ ನೆಪದಲ್ಲಿ ಮಕ್ಕಳಲ್ಲಿ ಸ್ವತಂತ್ರ ಮತ್ತು ಸ್ವಾವಲಂಬನೆಯ ನಡವಳಿಕೆ ರೂಪುಗೊಳಿಸುವುದು ಹೇಗೆ ಎನ್ನುವುದರ ಬಗ್ಗೆ ಯೋಚಿಸಿದ್ದೀರಾ?

■ ಸ್ವಯಂಪ್ರಭಾ

ಬೇಸಿಗೆ ರಜೆ ಬಂತೆಂದರೆ ಪ್ರವಾಸ ಹೋಗದಿದ್ದರೆ ಹೇಗೆ? ನೋಡಬೇಕು ಎಂದು ನಿರ್ಧರಿಸಿಕೊಂಡಿದ್ದ ಅನೇಕ ಸ್ಥಳಗಳನ್ನು ಮಳೆಗಾಲ ಬರುವ ಮುನ್ನವೇ ನೋಡಿಬರಬೇಕಲ್ಲವೇ. ಅಮ್ಮನ ಕನಸು, ಅಪ್ಪನ ಕನಸು, ಮಕ್ಕಳ ಕನಸು ಎಂದೆಲ್ಲಾ ಪಟ್ಟಿ ಮಾಡಿಕೊಳ್ಳುತ್ತ ಬೇಸಿಗೆ ರಜೆಯ ಪ್ರವಾಸವನ್ನು ಮಕ್ಕಳು ಎದುರು ನೋಡುತ್ತಿರುತ್ತಾರೆ.

ಸಂಬಂಧಿಕರ ಮನೆಗೆ, ಪ್ರವಾಸಿ ಸ್ಥಳಗಳಿಗೆ, ಒಳ್ಳೆಯ ಕಾರ್ಯಕ್ರಮಗಳಿಗೆ, ತೀರ್ಥಸ್ಥಳಗಳಿಗೆ ಹೋಗುವುದೊಂದು ರೂಢಿ. ಪ್ರವಾಸದ ಸಂದರ್ಭದಲ್ಲಿ ಎಷ್ಟೋ ವಿಷಯಗಳಿಗೆ ಮಾಫಿ ಇರುತ್ತದೆ. ಉದಾಹರಣೆಗೆ, ಇತರ ದಿನಗಳಲ್ಲಿ ಚಿಪ್ಸ್ ತಿನ್ನಬಾರದು ಎಂದು ತಾಕೀತು ಮಾಡುವ ಅಮ್ಮ, ಬಸ್ಸಿನಲ್ಲೋ ಕಾರಿನಲ್ಲೋ ಒಂದು ಆಲೂ ಭುಜಿಯಾ ತಿಂದರೆ ಏನೂ ಹೇಳುವುದಿಲ್ಲ. ಅವಳೂ ಒಂದು ಕೋನ್ ಐಸ್‌ಕ್ರೀಮ್ ತಿನ್ನುತ್ತಾ ನಗುತ್ತಾ ಇದ್ದುಬಿಡುತ್ತಾಳೆ. ಪ್ರವಾಸದ ದಿನಗಳಲ್ಲಿ ಹೆಚ್ಚು ಕಡಿವಾಣ ಇಲ್ಲದೇ ಇರುವುದು ಸಹಜ. ನಗುತ್ತಾ, ಹಾಡುತ್ತಾ ಪಯಣಿಸುವ ನೆನಪುಗಳು ಮಕ್ಕಳ ಜೀವನುದುದ್ದಕ್ಕೂ ಬೆಚ್ಚಗಿರುತ್ತವೆ.

ಪ್ರವಾಸ ಹೊರಡುವ ವೇಳೆ ಮಕ್ಕಳನ್ನು ಸಿದ್ಧಮಾಡುವುದು ಸುಲಭದ ಕೆಲಸವೇನಲ್ಲ. ಪುಟಾಣಿ ಸನ್ನಿಧಿ ಪ್ರತಿ ಬಾರಿ ಪ್ರವಾಸಕ್ಕೆ ಹೋಗುವಾಗ ಅವಳ 'ಪೂ' ಬೊಂಬೆ ಬೇಕೇಬೇಕು ಎನ್ನುತ್ತಿದ್ದಳು. ಅದಕ್ಕೊಂದು ಪ್ರತ್ಯೇಕ ಬ್ಯಾಗು ಸಿದ್ಧಮಾಡಿ ಅಮ್ಮ ಶರಣ್ಯ ಮಗಳನ್ನು ಸಮಾಧಾನಪಡಿಸಿ ಪ್ರವಾಸಕ್ಕೆ ಸಿದ್ಧಪಡಿಸುತ್ತಿದ್ದಳು. ಅವರಿಗೆ ಬೇಕಾದ ಆಹಾರ, ಕುರುಕಲು ತಿನಿಸು, ಬಟ್ಟೆಗಳು, ಔಷಧಿಗಳು, ಆಪತ್ತಿಗೆ ಬೇಕಾಗುವ ವಸ್ತುಗಳನ್ನೆಲ್ಲ ಜೋಡಿಸಿ ಸುಸ್ತಾಗುತ್ತಿದ್ದ ಶರಣ್ಯ, ಮತ್ಯಾವುದೋ ವಿಷಯವನ್ನು ಮರೆತು ಕೊನೆಗೆ ಮನೆಯವರಿಂದ ಬೈಸಿಕೊಳ್ಳುವುದಿತ್ತು. ಬಹುಶಃ ಇದು ಹೆಚ್ಚಿನ ಮನೆಗಳಲ್ಲಿ ಜರುಗುವ ಕಥೆಯಿರಬಹುದು. ಸನ್ನಿಧಿ ತುಸು ದೊಡ್ಡವಳಾದದ್ದೇ ಅಮ್ಮ ಅವಳಿಗೆ ಕೆಲವು ಪಾಠಗಳನ್ನು ಕಲಿಸಿಕೊಟ್ಟಳು.

ಮಕ್ಕಳು ಆರೇಳು ವರ್ಷದವರಾಗಿದ್ದರೆ, ಅವರ ಲಗೇಜನ್ನು ಅವರೇ ಪ್ಯಾಕ್ ಮಾಡಿಕೊಳ್ಳುವಂತೆ ಮಾರ್ಗದರ್ಶನ ಮಾಡಬಹುದು. ಶರಣ್ಯ ಮಗಳನ್ನು ಹುರಿದುಂಬಿಸಿದ್ದು ಹೀಗೆ: ಸಂಜೆ ಬಸ್ಸಿಗೆ ಹೊರಡುವ ನಾವು, ಮುಂಜಾನೆಯೇ ಮಂದಿರದ ಬಳಿ ಇಳಿಯುತ್ತೇವೆ. ಅಲ್ಲಿ ಕೊಠಡಿ ಪ್ರವೇಶಿಸಿದ ಕೂಡಲೇ ಏನು ಮಾಡ್ಬೇಕು ಎಂದು ಮಗಳನ್ನು ಪ್ರಶ್ನಿಸುತ್ತಾ, ಬ್ರಶ್ ಮಾಡ್ಬೇಕಲ್ವ... ಅದಕ್ಕಾಗಿ ಬ್ರಶ್ ಮತ್ತು ಪೇಸ್ಟು ಇಟ್ಟುಕೊ... ಅನಂತರ ಸ್ನಾನ ಮಾಡಲು ಸೋಪು ಅದರೊಡನೆಯೇ ಸೇರಿಸಿಕೊ... ಎಂದು ಹೇಳುತ್ತಿದ್ದಂತೆಯೇ ಸನ್ನಿಧಿ ಓಡೋಡಿ ಎಲ್ಲವನ್ನೂ ತಂದು ತನ್ನ ಗುಲಾಬಿ ಬಣ್ಣದ ಬಾರ್ಬಿ ಬ್ಯಾಗಿಗೆ ಸೇರಿಸಿದಳು.

ಸ್ನಾನವೆಲ್ಲ ಆದಮೇಲೆ ಮಂದಿರಕ್ಕೆ ಹೋಗಲು ಯಾವ ರೀತಿಯ ಬಟ್ಟೆ ಬೇಕು ಎಂದು ಅಮ್ಮ–ಮಗಳು ಚಿಂತಿಸುತ್ತಾ, ಸಾಂಪ್ರದಾಯಿಕ ಉಡುಗೆಯೊಂದನ್ನು ಎತ್ತಿಟ್ಟರು. ಅದಕ್ಕೆ ಬೇಕಾದ ಒಳಉಡುಪುಗಳು, ಅಲಂಕಾರ ಸಾಮಗ್ರಿಗಳನ್ನು ಹೊಂದಿಸಿಕೊಂಡದ್ದಾಯಿತು. ಹೀಗೆ ಎರಡು ದಿನದ ದಿನಚರಿಯನ್ನು ಕಾಲ್ಪನಿಕವಾಗಿ ಕಲ್ಪಿಸಿಕೊಂಡು, ತನ್ನ ಬಟ್ಟೆಯನ್ನು ತಾನೇ ಪ್ಯಾಕ್ ಮಾಡಿದ ಸನ್ನಿಧಿಗೆ ತನ್ನ ಬ್ಯಾಗ್ ತಾನೇ ಹೊತ್ತುಕೊಳ್ಳುವುದೆಂದು ಬಹಳ ಖುಷಿಯಾಯಿತು. ಅಷ್ಟರಲ್ಲಿ ತನ್ನ ಪೂ ಬ್ಯಾಗನ್ನೂ ತಾನೇ ಹೊತ್ತುಕೊಳ್ಳಬೇಕು ಎಂಬುದನ್ನು ಮನಸ್ಸಿಗೆ ತಂದುಕೊಂಡದ್ದೇ ಯಾಕೋ ಮುಖ ಬಾಡಿಸಿದ್ದಳು.

ಮಕ್ಕಳ ಲಗ್ಗೇಜು ಅವರ ಬಳಿಯೇ ಇದ್ದರೆ ಅವರಿಗೆ ಜವಾಬ್ದಾರಿಯ ಪಾಠವೊಂದನ್ನು ಹೇಳಿಕೊಟ್ಟು ಸ್ವತಂತ್ರರನ್ನಾಗಿ ಮಾಡಿದಂತಾಗುತ್ತದೆ. ಅಲ್ಲದೆ, ಅವರ ಪರವಾಗಿ ಯೋಚಿಸಿ ಬಟ್ಟೆಬರೆಗಳನ್ನು ಹೊಂದಿಸುವುದು ಮತ್ತು ಈ ಕೆಲಸದಲ್ಲಿ ತೊಡಕಾದಾಗ ಕಂಗಾಲಾಗುವ ಪ್ರಮೇಯವನ್ನು ತಪ್ಪಿಸಿದಂತಾಗುತ್ತದೆ. ಹಾಗೆ ನೋಡಿದರೆ ಮನೆಯವರ ಲಗ್ಗೇಜು ಪ್ಯಾಕ್ ಮಾಡುವ ಹೊಣೆಯನ್ನು ಅಮ್ಮನ ತಲೆಗೆ ಹೊರಿಸುವುದು ಎಷ್ಟು ಸರಿ ಎಂದು ಮಕ್ಕಳೂ ಒಂದು ಕ್ಷಣ ಯೋಚಿಸುವ ಅವಕಾಶ ಸೃಷ್ಟಿಯಾಗುತ್ತದೆ. ಇದೆಲ್ಲ ಒಳ್ಳೆಯ ವಿಚಾರಗಳಲ್ಲವೇ. ತಮಗೆ ಬೇಕಾದ ವಸ್ತುಗಳನ್ನು ತಾವೇ ಹೊಂದಿಸಿಕೊಳ್ಳುವುದು ಹೇಗೆ, ಅವುಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವುದು ಹೇಗೆ ಮತ್ತು ಜೋಪಾನ ಮಾಡಿಕೊಂಡು ಮರಳಿ ತರುವುದು ಹೇಗೆ ಎಂಬುದನ್ನೆಲ್ಲ ಈ ಪ್ರಕ್ರಿಯೆಯು ಪರೋಕ್ಷವಾಗಿ ತಿಳಿಸಿಕೊಡುತ್ತದೆ.

'ಈ ಬಾರಿ ಪ್ರವಾಸಕ್ಕೆ ಪುಟಾಣಿ ಬಾರ್ಬಿಯನ್ನು ಕರೆದೊಯ್ಯೋಣ. ಪ್ರತೀಬಾರಿ ಪೂ ಯಾಕೆ ಹೇಳು... ಇವಳಿಗೂ ಬೇರೆ ಬೇರೆ ಊರು ತೋರಿಸೋಣ...' ಎನ್ನುತ್ತಾ ನಿಧಾನವಾಗಿ ಮಗಳ ಮನವೊಲಿಸಿದ ಶರಣ್ಯ, ಬಾರ್ಬಿಯನ್ನೂ, ಅವಳ ದಿರಿಸು ಮತ್ತು ಬಾಚಣಿಗೆಯನ್ನೂ ಬ್ಯಾಗಿಗೆ ಸೇರಿಸಿದಳು. ಅಲ್ಲಿಗೆ, ಹೊಸ ಪ್ರವಾಸದಲ್ಲಿ ಪೂ ಬ್ಯಾಗೊಂದು ಕಡಿಮೆಯಾದಂತಾಯಿತು.

ಪ್ರತಿಕ್ರಿಯಿಸಿ: feedback@sudha.co.in